# ಬೆಂಗಳೂರಲ್ಲಿ ಮುಖ್ಯ ಅಪೊಸ್ತಲರು – ಸೆಪ್ಟೆಂಬರ್ 2025

## “ಇದು ಒಳ್ಳೇದನ್ನು ಮಾಡುವ ಸಮಯ”

ಬಹಳ ನಿರೀಕ್ಷೆಯೊಂದಿಗೆ, ಸೆಪ್ಟೆಂಬರ್ 21, 2025ರ ಭಾನುವಾರದಂದು ನಮ್ಮ ಮುಖ್ಯ ಅಪೊಸ್ತಲರ ಭೇಟಿಯ ಮೂಲಕ ನಾವು ಆತ್ಮಿಕ ಪುನರುಜ್ಜೀವನದ ಕ್ಷಣಕ್ಕಾಗಿ ಸಿದ್ಧರಾಗುತ್ತಿರುವೆವು. ಈ ಐತಿಹಾಸಿಕ ಭೇಟಿಯು, ಕರ್ನಾಟಕದ ಬೆಂಗಳೂರಿಗೆ, ಮುಖ್ಯ ಅಪೊಸ್ತಲರಾದ ಜಾನ್-ಲುಕ್-ಶ್ನೇಯ್ಡರ್ ಅವರ ಪ್ರಥಮ ಭೇಟಿಯನ್ನು ಸೂಚಿಸುತ್ತದೆ.

ನ್ಯೂ ಅಪೊಸ್ಟಾಲಿಕ್ ಚರ್ಚಿನ ಸಮುದಾಯದ ಪ್ರತಿಯೊಬ್ಬ ಸದಸ್ಯರನ್ನು, ಅವರು ನಂಬಿಕೆಯಲ್ಲೂ, ಅನ್ಯೋನ್ಯತೆಯಲ್ಲೂ ಮತ್ತು ಸಂತೋಷಭರಿತ ಐಕ್ಯತೆಯಲ್ಲೂ ಒಟ್ಟುಗೂಡಲು ಆಹ್ವಾನಿಸುತ್ತೇವೆ.

## ಮುಖ್ಯ ಅಪೊಸ್ತಲರ ಡಿವೈನ್ ಸರ್ವಿಸ್

- **ದಿನಾಂಕ** : ಭಾನುವಾರ, 21 ಸೆಪ್ಟೆಂಬರ್ 2025
- **ಸಮಯ** : ಬೆಳಿಗ್ಗೆ 11.00 ಗಂಟೆಗೆ
- **ಸ್ಥಳ** : *ಜ್ಯೋತಿ ನಿವಾಸ್ ಸಭಾಂಗಣ, ಕೋರಮಂಗಲ ಇಂಡಸ್ಟ್ರೀಯಲ್ ಲೇ-ಔಟ್, ಕೋರಮಂಗಲ, ಬೆಂಗಳೂರು, ಕರ್ನಾಟಕ 560034*

ಈ ಉಲ್ಲಾಸಭರಿತ ಡಿವೈನ್ ಸರ್ವಿಸ್ ನಮ್ಮ ತ್ರಯೈಕ ದೇವರೊಂದಿಗೆ ಅನ್ಯೋನ್ಯವಾಗಲು ಮತ್ತೊಂದು ಅವಕಾಶವಾಗಿರುವುದು – ಖಂಡಿತವಾಗಲೂ ಒಂದು ಶಾಶ್ವತವಾದ ಆತ್ಮಿಕ ಅಚ್ಚು ಬಿಡುವಂಥ ಆಚರಣೆ ಇದಾಗಿರುವುದು.

## ನೋಂದಣಿಯ ಕುರಿತಾದ ಮಾಹಿತಿ

ಈ ನೋಂದಣಿಯು ಪ್ರಾರಂಭವಾಗಿದೆ. ಪ್ರತಿ ವ್ಯಕ್ತಿ 500 ರೂಪಾಯಿ (ಅಥವಾ ಅದಕ್ಕಿಂತ ಹೆಚ್ಚಿನ) ಕೊಡುಗೆ ನೀಡುವ ಮೂಲಕ ನೀವು ಸಭಾಂಗಣದಲ್ಲಿ ನಿಮ್ಮ ಆಸನವನ್ನು ಕಾಯ್ದಿರಿಸಬಹುದು. ಈ ಸರ್ವಿಸಿನ ನಿಮಿತ್ತ, ಇನ್ನು ಹೆಚ್ಚಿನ ಉದಾರತೆಯಿಂದ ಕೊಡುಗೆ ನೀಡಲು ಬಯಸುವವರು ಬೆಂಬಲಿಸಬಹುದು.

ಆಸನಗಳು ಸೀಮಿತವಾಗಿರುವ ಕಾರಣ, ನಿಮ್ಮ ಸ್ಥಾನವನ್ನು ಖಚಿತಪಡಿಸಿಕೊಳ್ಳಲು ಆದಷ್ಟು ಬೇಗನೆ ಬುಕ್ ಮಾಡಿರಿ! ಈ ವಿಷಯದಲ್ಲಿ, ಸಹಾಯಕ್ಕಾಗಿ ದಯವಿಟ್ಟು ನಿಮ್ಮ ಡಿಸ್ಟ್ರಿಕ್ಟ್ ರೆಕ್ಟರ್ ಅಥವಾ ಅಪೊಸ್ತಲರನ್ನು ಸಂಪರ್ಕಿಸಿರಿ.

ಜಾಗ ಕಾಯ್ದಿರಿಸುವಿಕೆಗೆ ಸಂಬಂಧಿಸಿದ ಸೂಚನೆಗಳಿಗಾಗಿ ಪವಿತ್ರ ಭೋಜನ ಹಂಚುವವರು, ಸಹಾಯಕರು ಹಾಗು ದ್ವಾರಪಾಲಕ ಕಾರ್ಯದಲ್ಲಿ ಸಹಾಯಮಾಡುವವರು ತಮ್ಮ ಆಯಾ ಅಪೊಸ್ತಲರನ್ನು ನೇರವಾಗಿ ಸಂಪರ್ಕಿಸಲು ವಿನಂತಿಸಲಾಗಿದೆ. ಡಬಲ್ ಬುಕಿಂಗ್‌ಗೆ ಮರುಪಾವತಿ ಮಾಡಲಾಗುವುದಿಲ್ಲ ಎಂಬುದನ್ನು ದಯವಿಟ್ಟು ಗಮನದಲ್ಲಿಟ್ಟುಕೊಳ್ಳಿರಿ. ನೋಂದಣಿಗೆ ನೀಡಿರುವ ಹಣ, ಅಡ್ವಾನ್ಸ್ ಕಾಣಿಕೆಗಳಾಗಿರುವವು ಮತ್ತು ಮರುಪಾವತಿಸಲಾಗುವುದಿಲ್ಲ. ನಿಮ್ಮ ಉದಾರ ಬೆಂಬಲಕ್ಕೆ ಧನ್ಯವಾದಗಳು.

ಈ ಲಿಂಕ್‌ನ ಮೂಲಕ ನೀವು ನಿಮ್ಮ ಸ್ಥಾನವನ್ನು ನೋಂದಾಯಿಸಿಕೊಳ್ಳಬಹುದು –
*https://www.townscript.com/e/ka01ca2025-gf*

# ಬೆಂಗಳೂರಲ್ಲಿ ಮುಖ್ಯ ಅಪೊಸ್ತಲರು – ಸೆಪ್ಟೆಂಬರ್ 2025

## ಸರ್ವಿಸಿನ ನಂತರದ ಅನ್ಯೋನ್ಯತೆ ಹಾಗು ಸಾಮುದಾಯಿಕ ಭೋಜನ

ಡಿವೈನ್ ಸರ್ವಿಸಿನ ನಂತರ, ನಿಮ್ಮೆಲ್ಲರನ್ನು ರುಚಿಕರವಾದ ಊಟಕ್ಕೆ ಆಹ್ವಾನಿಸಲಾಗಿದೆ. ಊಟ ಸುಗಮ ಮತ್ತು ಸಂಘಟಿತ ರೀತಿಯಲ್ಲಿ ಜರುಗಲು, ನೀವು ವಾಲಂಟೀರ್‌ಗಳ ಮಾರ್ಗದರ್ಶನವನ್ನು ಅನುಸರಿಸಬೇಕೆಂದು ನಿಮ್ಮಲ್ಲಿ ನಾವು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇವೆ.

ನೀವು ಹಿಂದಿಕ್ಕೆ ಪ್ರಯಾಣಿಸುವ ಸಮಯವನ್ನು ತಿಳಿಸಿದರೆ, ಆಯೋಜಕರು ಆ ಕ್ರಮದಲ್ಲಿ ನಿಮಗೆ ಊಟದ ವ್ಯವಸ್ಥೆ ಮಾಡಲು ಅವರಿಗೆ ಸಹಾಯವಾಗುತ್ತದೆ. ನಿಮ್ಮ ಸರದಿಗಾಗಿ ಕಾಯುತ್ತಿರುವಾಗ, ನಿಮ್ಮ ಅನುಭವಗಳನ್ನು ಹಂಚಿಕೊಳ್ಳಲು, ನಿಮ್ಮ ಸಂಬಂಧಗಳನ್ನು ಇನ್ನೂ ಬಲಪಡಿಸಿಕೊಳ್ಳಲು ಮತ್ತು ಶಾಶ್ವತವಾದ ನೆನಪುಗಳನ್ನು ಉಳಿಸಿಕೊಳ್ಳಲು ಈ ಅವಕಾಶವನ್ನು ಉಪಯೋಗಿಸಿಕೊಳ್ಳಿರಿ.

## ಪ್ರಯಾಣ ಹಾಗು ವಸತಿ ವ್ಯವಸ್ಥೆಗಳು

ಹೊರ ಊರುಗಳಿಂದ ಆಗಮಿಸುವವರ ಅನುಕೂಲತೆ ಹಾಗು ಸೌಕರ್ಯತೆಗಾಗಿ ವಿಶೇಷ ವ್ಯವಸ್ಥೆಗಳು ಮಾಡಲಾಗಿವೆ. ಕಡಿಮೆ ದರದ ವಸತಿ ಆಯ್ಕೆಗಳು ಮತ್ತು ಸರ್ವಿಸ್ ಜರುಗುವ ಸ್ಥಳಕ್ಕೆ ಪ್ರಯಾಣ ಮಾಡಲು ಷಟಲು (ಹೋಗಿ ಬರುವ) ಸಾರಿಗೆಯು ಲಾಭರಹಿತ ಆಧಾರದ ಮೇಲೆ ಕನಿಷ್ಠ ಹೆಚ್ಚುವರಿ ವೆಚ್ಚದಲ್ಲಿ ಲಭ್ಯವಾಗಿರುವವು.

ರಿಸರ್ವೇಷನ್, ಪ್ರಯಾಣದ ವ್ಯವಸ್ಥೆ, ಅಥವಾ ವಸತಿಯ ವಿವರಗಳ ಕುರಿತಾದ ಸಹಾಯಕ್ಕಾಗಿ ದಯವಿಟ್ಟು ನಿಮ್ಮ ಕ್ಷೇತ್ರದ ನಾಯಕರನ್ನು ಅಥವಾ ಅಪೊಸ್ತಲರನ್ನು ಸಂಪರ್ಕಿಸಿರಿ.

## ಸೆಪ್ಟೆಂಬರ್ 2025 – ನಮ್ಮ ಮುಖ್ಯ ಅಪೊಸ್ತಲರ ಮೂಲಕ ಆತ್ಮಿಕ ಪುನರುಜ್ಜೀವನ

ಕ್ಷಣಗಣನೆಯು ಪ್ರಾರಂಭವಾಗಿದೆ!

**ವಿಭಜಕ ಶಕ್ತಿಗಳ ವಿರುದ್ಧ ಹೋರಾಡುವ ಮತ್ತು ಸುವಾರ್ತೆಯ ಪರಿಶುದ್ಧತೆಯನ್ನು ಕಾಪಾಡುವ** ನಮ್ಮ ಪ್ರಮಾಣಗಳನ್ನು ನವೀಕರಿಸಲು ನಾವು ಒಟ್ಟಾಗಿ ಬರುವ ಮೂಲಕ ನಮ್ಮ ಆತ್ಮೀಯ ಮುಖ್ಯ ಅಪೊಸ್ತಲರ ಹೃದಯ ಮತ್ತು ಕೈಗಳನ್ನು ಬಲಪಡಿಸೋಣ.

ಈ ಸಂದೇಶವನ್ನು ಸಾರಿರಿ. ನಿಮ್ಮ ಆತ್ಮೀಯರನ್ನು ಆಹ್ವಾನಿಸಿರಿ. ನಿಮ್ಮ ರಿಸರ್ವೇಷನ್‌ಗಳನ್ನು ಮಾಡಿಕೊಳ್ಳಿರಿ ಮತ್ತು ಇದನ್ನು, ಒಗ್ಗಟ್ಟಿನ, ಉದ್ದೇಶಭರಿತ ಮತ್ತು **"ಒಳ್ಳೇದನ್ನು ಮಾಡುವ"** ಕಾಲಾತೀತ ಕರೆಯ ಒಂದು ಆಚರಣೆಯನ್ನಾಗಿ ಮಾಡಿಕೊಳ್ಳಿರಿ.

#EeSalaBengaluru | #ThisTimeBengaluru | #ItIsTimeToDoGood